ಆ) ಎಷ್ಟು ಜನ ಕಾರ್ಮಿಕರು ಈ ಕೂಲಿಯನ್ನು ಪಡೆಯುತ್ತಿದ್ದಾರೆ ?

ಇ) ಮೂರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಇವರಿಗೂ ಅನ್ವಯಿಸಿ ವೇತನ ಪುನರ್ ವಿಮರ್ಶೆ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ತೀರ್ಮಾನವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ಕನಿಷ್ಠ ವೇತನ ಕಾಯ್ದೆಯ ಪ್ರಕಾರ ಗ್ಯಾಂಗ್ ಕೂಲಿಕಾರರು ಮತ್ತಿತರ ಕಾರ್ಮಿಕರಿಗೆ ರೂ. ೮ ರಿಂದ ರೂ. ೩೫ರವರೆಗೆ ಕನಿಷ್ಠ ವೇತನ ಕೊಡಲಾಗುತ್ತಿದೆ.

ಆ) ೨೫೧೧೬.

ಇ) ಇವರು ಖಾಯಂ ನೌಕರರು ಅಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಿ. ಯು. ಸಿ. ಸಿಲೆಬಸ್ಸಿನ ಪ್ರಕಟಣೆ ಬಗ್ಗೆ

೧೭ (೨೭೬) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಆ) ಪಿ. ಯು. ಸಿ. ಮಂಡಲಿಯು ಕೊಡುತ್ತಿದ್ದ ಸಿಲಬಸ್ಸನ್ನು ಇದುವರೆವಿಗೂ ಯಾರು ಮುದ್ರಿಸುತ್ತಿದ್ದರು, ಪ್ರಕಟಿಸುತ್ತಿದ್ದರು ಮತ್ತು ಮಾರಾಟ ಮಾಡುತ್ತಿದ್ದರು ?

ಆ) ಈ ಸಿಲಬಸ್ಸಿನ ಮುದ್ರಣ, ಪ್ರಕಟಣೆ ಮತ್ತು ಮಾರಾಟವನ್ನು ಖಾಸಗಿಯವರಿಗೆ ಕೊಟ್ಟಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಹಿಂದಿನಂತೆ ಸರ್ಕಾರ ಪಿ. ಯು. ಸಿ. ಮಂಡಲಿ ಮುದ್ರಿಸಿ, ಪ್ರಕಟಿಸಿ ಮತ್ತು ಮಾರಾಟ ಮಾಡುತ್ತಿದ್ದ ಪದ್ಧತಿಯನ್ನು ಪುನಃ ಜಾರಿಗೆ ತರಲಾಗುತ್ತದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಆ) ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯದವರು ಮುದ್ರಿಸಿ ಮಾರಾಟಕ್ಕೆ ಬಿಡುಗಡೆ ಮಾಡುತ್ತಿದ್ದರು.

ಆ) ಹೌದು. ಸರ್ಕಾರಿ ಕೇಂದ್ರ ಮುದ್ರಣಾಲಯದ ನಿರ್ದೇಶಕರು ಬೆಂಗಳೂರು ಇವರು ಸದರಿ ಸಿಲಬಸ್ ಪ್ರತಿಗಳನ್ನು ಮುದ್ರಿಸಿ ಮಾರಾಟ ಮಾಡಲು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರಿಂದ ಹಾಗೂ ಸಕಾಲದಲ್ಲಿ ಸಿಲಿಬಸ್ ಪುಸ್ತಕವನ್ನು ಹೊರತರ ಬೇಕಾದುದರಿಂದ ಖಾಸಗಿಯವರಿಗೆ ವಹಿಸಲಾಯಿತು.

ಇ) ಪರಿಶೀಲಿಸಲಾಗುವುದು.

ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ಪರೀಕ್ಷಾ ಮಂಡಲಿಗಳ ವಿಕೇಂದ್ರೀಕರಣದ ಬಗ್ಗೆ

೧೮ (೨೭೮) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ವಿದ್ಯಾರ್ಥಿಗಳಿಗನ್ವಯಿಸುವಂತೆ ಬೆಂಗಳೂರಿನಲ್ಲಿ ಒಂದೇ ಒಂದು ಪರೀಕ್ಷಾ ಮಂಡಲಿಯಿರುವುದು ಸರ್ಕಾರದವರಿಗೆ ತಿಳಿದಿದೆಯೇ ?

ಆ) ಇದರಿಂದಾಗಿ ಕಣ್ಣು ಸಣ್ಣ ತಪ್ಪುಗಳಿಗೂ ಸಹ ದೂರದಿಂದ ಬರುವ ವಿದ್ಯಾರ್ಥಿಗಳು ವಿನಾಕಾರಣ ಹಣ ಖರ್ಚು ಮಾಡಿ ತೊಂದರೆಗೀಡಾಗುವ ಪರಿಸ್ಥಿತಿ ಬಂದಿಲ್ಲವೇ ?

ಇ) ಈ ವಿಷಯದ ಬಗ್ಗೆ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಘಟಕ ಜಾಥಾ ಮಾಡಿ, ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ಸರ್ಕಾರದವರಿಗೆ ತಿಳಿದಿದೆಯೇ ?